ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ
ಸಿಸಿ ನಂಬರ 292/2020

ಸಿ ಡಬ್ಲ್ಯೂ- 1
ಪಿ ಡಬ್ಲ್ಯೂ- 1

ದಿಃ 17-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಅಪ್ಪಯ್ಯ ಅಡಳ್ಳಿಮಠ
ತಂದೆಯ ಹೆಸರುಃ ಶಿವಲಿಂಗಯ್ಯ
ವಯಸ್ಸುಃ **55** ವರ್ಷ
ಉದ್ಯೋಗಃ ವಿಭಾಗೀಯ ತಾಂತ್ರಿಕ ವಿಭಾಗ
ವಿಳಾಸಃ **ಶಿರಶಿ ಬಸ್ ಘಟಕ, ಶಿರಶಿ**

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

2017 ರಿಂದ 2019 ರವರೆಗೆ ಅಂಕೋಲಾ ಬಸ್ ಡಿಪೋದ ಘಟಕ ವ್ಯವಸ್ಥಾಪಕನೆಂದು ಸೇವೆ ಸಲ್ಲಿಸಿದ್ದೇನೆ. ಚಾಸಾ-2 ರಿಂದ 10 ರವರು ಅಂಕೋಲಾದಲ್ಲಿ ನಾನು ಸೇವೆ ಸಲ್ಲಿಸುತ್ತಿದ್ದಾಗ ಅವರೂ ಕೂಡ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು, ಚಾಸಾ-11 ನನ್ನ ಮೇಲಾಧಿಕಾರಿ. ಆರೋಪಿ ನಮ್ಮ ಬಸ್ ಡಿಪೋದಲ್ಲಿ ಚಾಲಕನೆಂದು ತರಬೇತಿ ಪಡೆಯುತ್ತಿದ್ದ. ದಿಃ30-07-2018 ರಂದು ಚಾಸಾ-6 ರವರ ಜೊತೆ ಕರ್ತವ್ಯದ ವಿಚಾರವಾಗಿ ಅನುಚಿತವಾಗಿ ನಡೆದುಕೊಂಡಿದ್ದ. ಅದಾದ ನಂತರ 31-07-2018 ರಂದು ಚಾಸಾ-7 ರವರ ಜೊತೆಯೂ ಸಹ ಕರ್ತವ್ಯದ ವಿಚಾರವಾಗಿ ಅನುಚಿತವಾಗಿ ವರ್ತಿಸಿದ್ದ. ಸದರಿ ಆರೋಪಿತನ ಅನುಚಿತ ವರ್ತನೆಯ ಕುರಿತಾಗಿ ಚಾಸಾ-6 ಮತ್ತು 7 ರವರು ನನಗೆ ವರದಿ ನೀಡಿದ್ದರು.

ಸದರಿ ವರದಿಯನ್ನು ಶಿಸ್ತು ಕ್ರಮಕ್ಕಾಗಿ ಮೇಲಾಧಿಕಾರಿಗಳಿಗೆ ಕಳುಹಿಸಿದ್ದೆ. ದಿಃ10-08-2018 ರಂದು ಆರೋಪಿತನ ಕರ್ತವ್ಯ ತಡೆ ಆದೇಶ ಬಂದಿದ್ದು, ಅದನ್ನು 12-08-2018 ರಂದು ಸದರಿ ಆದೇಶದ ಪ್ರತಿಯನ್ನು ಆರೋಪಿಗೆ ಜಾರಿ ಮಾಡಿದ್ದೇ. ಸದರಿ ಶಿಸ್ತು ಕ್ರಮಕ್ಕಾಗಿ ಸಲ್ಲಿಸಿದ ವರದಿ, ಶಿರಶಿ ಬಸ್ ವಿಭಾಗ ನಿಯಂತ್ರನಾಧಿಕಾರಿ ಕಳುಹಿಸಿದ ಕಾರಣ ಕೇಳುವ ಸೂಚನಾ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-1,2, ಸಾಕ್ಷಿ ಸಹಿಯನ್ನು ನಿಪಿ-1 ಎ, 2 ಎ ಎಂದು ಗುರುತಿಸಲಾಯಿತು. ಸದರಿ ಆದೇಶದ ಪ್ರತಿ ಆರೋಪಿಗೆ ಜಾರಿ ಮಾಡಿದ ನಂತರ ಬೆಳಿಗ್ಗೆ 9-30 ಗಂಟೆಗೆ ಕರ್ತವ್ಯದಲ್ಲಿದ್ದ ಚಾಸಾ-6 ರವರ ಜೊತೆ ಜಗಳ ತೆಗೆದು 'ಬೋಳಿ ಮಗನೇ, ಸೂಳೆ ಮಗನೇ' ಎಂದು ತಾಯಿ ಮೇಲೆ ಬೈದು, 'ನೀನು ಹೇಗೆ ಡ್ಯೂಟಿ ಮಾಡುತ್ತೀ, ನೋಡಿಕೊಳ್ಳುತ್ತೇನೆ, ಜೀವ ಸಹಿತ ಬಿಡುವುದಿಲ್ಲ' ಎಂದು ಬೈದಾಡಿ, ಡಿಪೋದ ಗೇಟ್ ಬಳಿ ಇರುವ ಚಾಸಾ-7 ರವರಿಗೂ ಸಹ ಅದೇ ರೀತಿ ಬೈದಾಡಿರುತ್ತಾನೆ. ಸದರಿ ಘಟನೆಯ ಸಮಯದಲ್ಲಿ ಅಂಕೋಲಾ ಬಸ್ ಸ್ಟ್ಯಾಂಡ್‌ನಲ್ಲಿ ಕರ್ತವ್ಯದಲ್ಲಿದ್ದು, ಆರೋಪಿತನು 9611004353 ನಂಬರಿನಿಂದ ಡಿಪೋ ಮ್ಯಾನೇಜರ್ ನಂಬರಾದ 7338039284 ಕ್ಕೆ ಕರೆ ಮಾಡಿ, ನನಗೂ ಸಹ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಅಂಕೋಲಾದಲ್ಲಿ ನೌಕರಿ ಹೇಗೆ ಮಾಡುತ್ತೀ ಎಂದು ಬೆದರಿಕೆ ಹಾಕಿ, ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾನೆ.

ಆರೋಪಿತನ ವರ್ತನೆ ಕುರಿತು ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ದೂರು ನೀಡಿರುತ್ತೇನೆ. ಸಾಕ್ಷಿ ಅಪರಾಧ ವರದಿ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3, ಸಾಕ್ಷಿ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ತದನಂತರ ನಾನು ತೋರಿಸಿದ ಬಸ್ ಡಿಪೋ ಹಾಗೂ ಬಸ್ ನಿಲ್ದಾಣದಲ್ಲಿಯ ಸ್ಥಳಗಳನ್ನು ಪೊಲೀಸರು ಪಂಚನಾಮೆ ಮಾಡಿ, ಓದಿ ಹೇಳಿ ಸಹಿ ಪಡೆದಿರುತ್ತಾರೆ. ಸಾಕ್ಷಿ ಪಂಚನಾಮೆಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು,

ಅದನ್ನು ನಿಪಿ–**4,** ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ–**4** ಎ ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ

ದಿನಾಂಕಃ 30-07-2018 ರಂದು ನಾನು ರಜೆಯಲ್ಲಿದ್ದೆ. ದಿಃ31-07-2018 ರಂದು ನಾನು ಡಿಪೋದಲ್ಲಿ ಕರ್ತವ್ಯದಲ್ಲಿದ್ದೆ. ದಿಃ31-07-2018 ರಂದು ಅನುಚಿತವಾಗಿ ವರ್ತಿಸಿದ್ದ ಎಂಬುವ ಸಮಯ ಬೆಳಿಗ್ಗೆ ಅಂದಾಜು 9-00 ಗಂಟೆಯಾಗಿರಬಹುದು. ನಾನು ಸದರಿ ಸಮಯದಲ್ಲಿ ಡಿಪೋದಲ್ಲಿ ಕರ್ತವ್ಯದ ಮೇಲಿದ್ದೆ ಎಂದು ತೋರಿಸಲು ಹಾಜರಾತಿ ಪತ್ರ ತನಿಖಾದಿಕಾರಿಗೆ ನೀಡಿದ ಬಗ್ಗೆ ನೆನಪಿಲ್ಲ. ಕರ್ತವ್ಯಕ್ಕೆ ಹಾಜರಾದ ಕುರಿತು ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುತ್ತೇವೆ ಎಂದರೆ ಸರಿ. ಕರ್ತವ್ಯದಿಂದ ನಿರ್ಗಮಿಸುವ ಸಮಯದಲ್ಲಿ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುವುದಿಲ್ಲ. ಸಾಕ್ಷಿ ಮುಂದುವರೆದು ಡಿಪೋ ಮ್ಯಾನೇಜರ ಮೇಲ್ಪಟ್ಟ ಅಧಿಕಾರಿಗಳಿಗೆ ದಿನದ ಹಾಜರಾತಿ ರಿಜಿಸ್ಟರ್ ಇರುವುದಿಲ್ಲ, ಆದರೆ ಪ್ರತಿ ತಿಂಗಳಿಗೊಮ್ಮೆ ಕರ್ತವ್ಯಕ್ಕೆ ಹಾಜರಾದ ಬಗ್ಗೆ ದೃಢೀಕರಣ ಪತ್ರ ಕೊಡುತ್ತೇವೆ. ನನ್ನ ಕರ್ತವ್ಯದ ಹಾಜರಾತಿ ಮೇಲಾಧಿಕಾರಿ ನೋಡುವುದಿದ್ದರೆ ಮುಖ್ಯ ಬಾಗಿಲ ಬಳಿ ಇರುವ ರಿಜಿಸ್ಟರ್ ಹಾಗೂ ದಿನನಿತ್ಯದ ಕರ್ತವ್ಯದಲ್ಲಿ ನಿರ್ವಹಿಸುವ ಕಾರ್ಯಕಲಾಪಗಳಲ್ಲಿನ ಸಹಿ ಪರಿಶೀಲಿಸುತ್ತಾರೆ. ನಮ್ಮ ಡಿಪೋದಲ್ಲಿ ಡಿಜಿಟಲ್ ಹಾಜರಾತಿ ವ್ಯವಸ್ಥೆ ಇರುವುದಿಲ್ಲ. ಸೆಕ್ಯುರಿಟಿ ಗೇಟ್ ನಲ್ಲಿ ನಾನು ಬಂದು ಹೋದ ಬಗ್ಗೆ ಅವಧಿ ನಮೂದಿಸಲಾಗುತ್ತದೆ ವಿನಃ ರಿಜಿಸ್ಟರ್ಗೆ ನನ್ನ ಸಹಿ ಇರುವುದಿಲ್ಲ. ಸದರಿ ದಾಖಲೆಗಳನ್ನು ತನಿಖಾಧಿಕಾರಿಗೆ ನೀಡಿದ ಬಗ್ಗೆ ಮಾಹಿತಿ

ಇಲ್ಲ. ನಾನು ಕರ್ತವ್ಯದಲ್ಲಿದ್ದ ಬಗ್ಗೆ ತೋರಿಸಲು ನನ್ನ ಸಹಿಯುಳ್ಳ ಬ್ಯಾಂಕ್ ರೆಮಿಟೆನ್ಸ್ ಹಾಗೂ ಇತರೆ ದಾಖಲಾತಿಗಳನ್ನು ತನಿಖಾಧಿಕಾರಿಗಳು ಪಡೆದ ಬಗ್ಗೆ ಹಾಗುಾ ನಾನು ಒದಗಿಸಿದ ಬಗ್ಗೆ ಮಾಹಿತಿ ಇಲ್ಲ. ನಾನು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಪ್ರತಿ ತಿಂಗಳು ನೀಡುವ ನನ್ನ ಹಾಜರತಿ ದೃಢೀಕರಣದಲ್ಲಿ ನಮೂದಿಸುವುದಿಲ್ಲ, ಆದರೆ ರಜೆ, ವಾರದ ರಜೆ, ಗಳಿಕೆ ರಜೆ ಹಾಗುಾ ರಜೆ ಕುರಿತು ಮಾತ್ರ ನಮೂದಿಸಲಾಗುತ್ತದೆ. ಸದರಿ ದಾಖಲೆಗಳನ್ನು ತನಿಖಾಧಿಕಾರಿ ಮುಂದೆ ನೀಡಿದ ಬಗ್ಗೆ ಮಾಹಿತಿ ಇಲ್ಲ.

ನನ್ನ ಹಾಜರಾತಿ ಕುರಿತು ದೃಢೀಕರಣ ಪತ್ರ ನೀಡಿದ ಬಗ್ಗೆ ನನಗೆ ನೆನಪಿಲ್ಲ. ನನ್ನ ಕೆಳಹಂತದ ಅಧಿಕಾರಿಗಳು ಭದ್ರತಾ ಗೇಟ್ ಬಳಿ ಹಾಗೂ ದಿನದ ಹಾಜರಾತಿಯಲ್ಲಿ ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಟೆಕ್ನಿಕಲ್ ವಿಭಾಗದವರು ಅವರಿಗೆ ಸಂಬಂಧಪಟ್ಟ ವರ್ಕಶಾಫ್ ರಿಜಿಸ್ಟರಗೆ ಸಹಿ ಮಾಡುತ್ತಾರೆ, ಡ್ಯೂಟಿ ಚಾಲಕ ಮತ್ತು ನಿರ್ವಾಹಕರಿಗೆ ಅನುಸೂಚಿ ಸಂಖ್ಯೆಯಲ್ಲಿ ಅವರ ಕರ್ತವ್ಯದ ಕುರಿತು ನಮೂದಾಗುತ್ತದೆ ಎಂದು ಹೇಳುತ್ತಾರೆ. ಪಾರುಪತ್ಯದಾರ ಮತ್ತು ಸಹಾಯಕ ಸಂಚಾರಿ ನಿರೀಕ್ಷಕರ ಕೆಲಸಕ್ಕೆ ಡ್ಯೂಟಿ ರಿಜಿಸ್ಟರ್ ಇರುತ್ತದೆ. ಘಟನೆ ನಡೆದಿದೆ ಎನ್ನಲಾದ ದಿವಸ ಇರುವ ಪಾರುಪತ್ಯದಾರ ಮತ್ತು ಸಹಾಯಕ ಸಂಚಾರಿ ನಿರೀಕ್ಷಕರ ಡ್ಯೂಟಿ ರಿಜಿಸ್ಟರ್ ಪರಿಶೀಲಿಸಿದ್ದೇನೆ. ಸದರಿ ಕರ್ತವ್ಯದ ರಿಜಿಸ್ಟರ್ ಪ್ರತಿಯನ್ನು ತನಿಖಾದಿಕಾರಿಗೆ ನೀಡಬೇಕಾಗುತ್ತದೆ. ಈ ಪ್ರಕರಣದಲ್ಲಿ ಡ್ಯೂಟಿ ರಿಜಿಸ್ಟರ್ ಪ್ರತಿ ನೀಡಿದ ಬಗ್ಗೆ ನೆನಪಿಲ್ಲ.

ಘಟನೆ ಕುರಿತು ಇರುವ ಕಚೇರಿ ಕಡತವನ್ನು ನಾನು ನೋಡಿಕೊಂಡಿದ್ದೇನೆ. ಪೊಲೀಸರಿಗೆ ಯಾವ ಯಾವ ದಾಖಲೆ ನೀಡಿದ ಬಗ್ಗೆ ನಮ್ಮ ಕಚೇರಿ ಕಡತದಲ್ಲಿ ಮಾಹಿತಿ ಇಲ್ಲ. ಡಿಪೋದಲ್ಲಿ ಕರ್ತವ್ಯದಲ್ಲಿದ್ದ ವ್ಯಕ್ತಿಗಳ ಹಾಜರಾತಿ ಕುರಿತು ರಿಜಿಸ್ಟರ್ ಇರುವುದರಿಂದ ನಾನು ಪ್ರತ್ಯೇಕ ದೃಢೀಕರಣ ಕೊಡುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿ ತನಿಖಾಧಿಕಾರಿ ಕೇಳಿದರೆ ನೀಡಬೇಕಾಗುತ್ತದೆ ಎಂದು ಹೇಳುತ್ತಾರೆ. ಡ್ಯೂಟಿ ರಜಿಸ್ಟರ್ ದೃಢೀಕರಣ ಪತ್ರಕ್ಕಿಂತ ನೈಜವಾದ ದಾಖಲೆ ಎಂದರೆ ಸರಿ.

ಆರೋಪಿ ನನಗೆ ಅಂದಾಜು 2–ನಿಮೀಷದವರೆಗೆ ಪೋನಿನಲ್ಲಿ ಬೈದಾಡಿರುತ್ತಾನೆ. ನನಗೆ ವಯೋಸಹಜ ಬಿಪಿ, ಶುಗರ್ ಇರುವುದಿಲ್ಲ. ಆರೋಪಿ ಬೈದ ನಂತರ ಕರ್ತವ್ಯ ಬಿಟ್ಟು ಕುಳಿತುಕೊಳ್ಳುವಷ್ಟು ಮಾನಸಿಕ ಹಿಂಸೆ ಆಗಿಲ್ಲ ಎಂದರೆ ಸಾಕ್ಷಿ ಮಾನಸಿಕವಾಗಿ ತೊಂದರೆ ಅನಿಸಿತು ಆದರೆ ಆದಿನ ಕರ್ತವ್ಯ ಬಿಟ್ಟು ಹೋಗಿಲ್ಲ. ಆ ದಿನ ನಾನು ನನ್ನ ಕರ್ತವ್ಯದಲ್ಲಿ ಸದರಿ ಘಟನೆಯಿಂದ ಕರ್ತವ್ಯಲೋಪವೆಸಗಿಲ್ಲ. ಘಟನೆ ಆಯಿತೆಂದು ನಾನು ಆಸ್ಪತ್ರೆಗೆ ದಾಖಲಾಗಿಲ್ಲ ಮತ್ತು ಯಾವುದೇ ಚಿಕಿತ್ಸೆಯನ್ನು ಪಡೆದಿಲ್ಲ.

ಘಟನೆ ನಡೆದಿದೆ ಎನ್ನುವ ದಿನ ನಾನು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹಾಜರಾತಿ ದೃಢೀಕರಣವನ್ನು ನಮ್ಮ ಮೇಲಾಧಿಕಾರಿ ನೀಡುತ್ತಾರೆ ಎಂದರೆ ಸರಿ. ಕರ್ತವ್ಯದ ಮೇಲೆ ಇದ್ದ ಬಗ್ಗೆ ದಾಖಲೆಗಳು ಇದ್ದರೆ ಅದನ್ನು, ಒಂದಾನುವೇಳೆ ದಾಖಲೆಗಳು ಇರದಿದ್ದರೆ ದೃಢೀಕರಣ ಪತ್ರ ನೀಡುತ್ತಾರೆ ಎಂದರೆ ಸಾಕ್ಷಿ ಎರಡನ್ನೂ ನೀಡಬಹುದು ಎಂದು ಹೇಳುತ್ತಾರೆ. ನಾನು ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ಘಟಕ ವ್ಯವಸ್ಥಾಪಕ ಎಂದು

ಸೇವೆ ಸಲ್ಲಿಸುತ್ತಿದ್ದೆ. ನನ್ನ ಹಾಜರಾತಿ ಕುರಿತು ಮೇಲಾಧಿಕಾರಿ ದೃಢೀಕರಣವನ್ನು ನನ್ನ ಸಮಕ್ಷಮ ತನಿಖಾಧಿಕಾರಿಗೆ ಸಲ್ಲಿಸಿಲ್ಲ. ನನ್ನ ಹತ್ತಿರ ಇರುವ ಮೊಬೈಲ್‌ನಲ್ಲಿರುವ ದಾಖಲೆಗಳು ವಯಕ್ತಿಕವಾಗಿರುತ್ತವೆ ಎಂದರೆ ಸರಿ. ಘಟನೆ ನಡೆದಿದೆ ಎನ್ನಲಾದ ದಿವಸದ ಕಾಲ್ ರಿಜಿಸ್ಟರ್ ಪಡೆಯಲು ನಾನು ಅರ್ಜಿ ನೀಡಿಲ್ಲ. ಸದರಿ ಕಾಲ್ ರಿಜಿಸ್ಟರ್ ಪಡೆಯಲು ತನಿಖಾಧಿಕಾರಿ ನನ್ನ ಕಡೆಯಿಂದ ಅರ್ಜಿಗೆ ಸಹಿ ಪಡೆದಿಲ್ಲ. ಮುಂದುವರೆದು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಯಾವುದಾದರೂ ಘಟನೆ ನಡೆದರೆ ಆ ದಿನ ಹಾಜರಾತಿ ಬಗ್ಗೆ ದೃಢೀಕರಣ ನೀಡಲಾಗುತ್ತದೆ ವಿನಃ ಸದರಿ ಘಟನಾ ಸಮಯದಲ್ಲಿ ಇದ್ದ ಸಮಯದ ಕುರಿತು ನಮೂದಿಸುವುದಿಲ್ಲ.

ಘಟನಾ ದಿವಸ ಅಂಕೋಲಾ ಬಸ್ ನಿಲ್ದಾಣದಲ್ಲಿ ಕರ್ತವ್ಯದಲ್ಲಿದ್ದ ಬಗ್ಗೆ ದಾಖಲಾತಿ ಇಲ್ಲ, ಆದರೆ ಆದಿನ ಬಸ್ ನಿಲ್ದಾಣ ಸ್ವಚ್ಚತಾ ಮೇಲ್ವಿಚಾರಣೆಯಲ್ಲಿದ್ದೆ. ಬಸ್ ನಿಲ್ದಾಣದಲ್ಲಿ ಘಟನೆ ನಡೆದಿದೆ ಎನ್ನಲಾದ ದಿವಸ ಸಾಕಷ್ಟು ಪ್ರಯಾಣಿಕರ ಓಡಾಟ ಇತ್ತು. ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ನನ್ನ ಬಳಿ ಸಾರ್ವಜನಿಕರು ಯಾರೂ ಬಂದಿಲ್ಲ. ಘಟನೆ ದಿವಸ ಆರೋಪಿ ತನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಕುರಿತು ವಿಷಯ ತಿಳಿಸಿ ಸಾಕ್ಷಿ ಆಗುವಂತೆ ಬಸ್ ನಿಲ್ದಾಣದಲ್ಲಿನ ಪ್ರಯಾಣಿಕರಿಗೆ ನಾನು ವಿನಂತಿಸಿಲ್ಲ. ಪಂಚನಾಮೆಯನ್ನು ಎಷ್ಟು ಗಂಟೆಗೆ ಮಾಡಿರುತ್ತಾರೆ ಎಂದು ಸಮಯ ನೆನಪಿಲ್ಲ. ದಿನಂಪ್ರತಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರ ಓಡಾಟ ಇರುತ್ತದೆ ಎಂದರೆ ಸರಿ. ಪಂಚನಾಮೆ ಮಾಡಿದೆ ಎನ್ನಲಾದ ಸಮಯದಲ್ಲಿ ಸ್ಥಳದಲ್ಲಿ ಹಾಜರಿರುವ ಸಾರ್ವಜನಿಕರನ್ನು ಪಂಚನಾಮೆಗೆ ಸಹಕರಿಸುವಂತೆ ತನಿಖಾಧಿಕಾರಿ ಕರೆದಿಲ್ಲ, ಸಾಕ್ಷಿ

ಮುಂದುವರೆದು ಆ ರೀತಿ ವಿನಂತಿಸಿದ ಕುರಿತು ನೆನಪಿಲ್ಲ, ನಾನು ಯಾವುದೇ ಸಾರ್ವಜನಿಕರಿಗೆ ವಿನಂತಿಸಿಲ್ಲ.

ಅಂಕೋಲಾ ಬಸ್ ನಿಲ್ದಾಣ ಒಟ್ಟು 2–ಎಕರೆ ಜಮೀನಿದೆ. ಸದರಿ ಬಸ್ ನಿಲ್ದಾಣದಲ್ಲಿ ಅಂಗಡಿ ಮುಂಗಟ್ಟು, ಪ್ರಯಾಣಿಕರ ಹಾಗೂ ಬಸ್ ತಂಗುದಾನ, ಶೌಚಾಲಯದ ವ್ಯವಸ್ಥೆ ಇದೆ ಎಂದರೆ ಸರಿ. ಸದರಿ ಬಸ್ ಸ್ಟ್ಯಾಂಡ್ ಮುಖ್ಯ ದ್ವಾರದ ಬಳಿ ಸಾಗುವಾನಿ ಮರ ಇದೆ ಎಂದರೆ ಸರಿ. ಸಾಕಷ್ಟು ಅಂಗಡಿಕಾರರು ಡಿಪೋ ಆಸ್ತಿಯ ಬಾಡಿಗೆಯಲ್ಲಿದ್ದಾರೆ ಎಂದರೆ ಸರಿ. ಬಸ್ ಸ್ಟ್ಯಾಂಡ್ ಒಳಗಡೆ ಹೋಗುವ ಸ್ಥಳಗಳಲ್ಲಿ ಸಹ ಅಂಗಡಿ ಮುಂಗಟ್ಟುಗಳಿವೆ ಎಂದರೆ ಸರಿ. ಬಸ್ ಸ್ಟ್ಯಾಂಡ್ ಕ್ಯಾಂಟೀನ್ ಇದೆ ಎಂದರೆ ಸರಿ.

ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ಜೈಹಿಂದ್ ಸ್ಕೂಲ್ ದಿಕ್ಕಿನ ಹತ್ತಿರ ಇರುವ ಬೊರ್ ವೆಲ್ ಬಳಿ ನಾನು ಶುಚಿ ಕೆಲಸದ ಮೇಲ್ವಿಚಾರಣೆಯಲ್ಲಿದ್ದೆ. ಸದರಿ ಘಟನೆ ನಡೆದಿದೆ ಅನ್ನುವ ಸ್ಥಳ ಬಸ್ ಸ್ಟ್ಯಾಂಡ್ ನ ಯಾವ ದಿಕ್ಕಿನ ಕಡೆ ಇದೆ ಎಂದು ಹೇಳಲು ಬರುವುದಿಲ್ಲ. ಅಂಕೋಲಾ ಬಸ್ ನಿಲ್ದಾಣ ಯಾವ ದಿಕ್ಕಿಗೆ ಮುಖ ಮಾಡಿದೆ ಎಂದು ಹೇಳಲು ಬರುವುದಿಲ್ಲ. ಅಂಕೋಲಾ ಬಸ್ ಡಿಪೋ ದಕ್ಷಿಣದ ಕಡೆ ಮುಖ ಇದೆ. ಪಾರುಪತ್ತ್ಯದಾರರ ಕಚೇರಿಯು ಮೆಂಟೆನೆನ್ಸ್ ಬೇ ಹತ್ತಿರ ಇದೆ, ಆದರೆ ಡಿಪೋದ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ಹೇಳಲು ಬರುವುದಿಲ್ಲ. ನಾನು ಡಿಪ್ಲೋಮಾ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ದಿಕ್ಕುಗಳ ಬಗ್ಗೆ ಮಾಹಿತಿ ಇದೆ ಎಂದರೆ ಮಾಹಿತಿ ಇದೆ. ಸಂಚಾರಿ ನಿರೀಕ್ಷಕರ ಕಚೇರಿಯು ಬಸ್ ಡಿಪೋದಲ್ಲಿ

ಪಶ್ಚಿಮದ ಕಡೆ ಮುಖ ಮಾಡಿದೆ. ಚಾಸಾ–6 ರವರ ಕಚೇರಿ ದಕ್ಷಿಣದ ದಿಕ್ಕಿಗೆ ಮುಖ ಮಾಡಿದೆ.

ಘಟನೆ ಕುರಿತು ನಾನು ಬೆಳಿಗ್ಗೆ 10–30 ಗಂಟೆಗೆ ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಬಸ್ ಸ್ಟ್ಯಾಂಡ್‌ನಿಂದ ಪೋಲೀಸ್ ಠಾಣೆಗೆ 2–3 ನಿಮಿಷಗಳಲ್ಲಿ ಹೋಗಬಹುದು ಎಂದರೆ ಸರಿ. ಚಾಸಾ–6 ಮತ್ತು 7 ರವರು ಘಟನೆ ಕುರಿತು ನನಗೆ ಲಿಖಿತ ವರದಿ ನೀಡಿರುತ್ತಾರೆ. ಸದರಿ ವರದಿಗಳನ್ನು ಫಿರ್ಯಾದಿ ಜೊತೆ ಸಲ್ಲಿಸಿದ್ದೇನೆ. ಸದರಿ ಚಾಸಾ–6 ಮತ್ತು 7 ರವರ ವರದಿಗಳನ್ನು ಸ್ವೀಕರಿಸುವ ಸಮಯದಲ್ಲಿ ಅದಕ್ಕೆ ಸ್ವೀಕೃತಿ ಕುರಿತು ಸಹಿ ಮಾಡಿದ ಬಗ್ಗೆ ನೆನಪಿಲ್ಲ. ಯಾವುದಾದರೂ ಅರ್ಜಿ ಬಂದರೆ ಆ ಕುರಿತು ಅದರ ಮೇಲೆ ಶರಾ ಬರೆಯುತ್ತೇವೆ ಎಂದರೆ ಸರಿ.

ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

ಜೆ ಎಂ ಎಫ ಸಿ, ಅಂಕೋಲಾ.